ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp.33-40
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

ಸಲಾಂ ಬೆಂಗಳೂರಿನ–ಸಂಕೀರ್ಣ ಬದುಕು

ಶಿವಕುಮಾರ್ ಜೆ[1] ಮತ್ತು ಡಾ. ಬಿ. ಪ್ರಭುಸ್ವಾಮಿ[2]

[1]ಸಂಶೋಧನಾರ್ಥಿ, [2]ಸಹಾಯಕ ಪ್ರಾಧ್ಯಾಪಕರು

ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ವಿಭಾಗ. ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರು.

Abstract:

ಅನೇಕ ಮಹಾನಗರಗಳು ಒಂದು ಕಾಲದಲ್ಲಿ ಹಳ್ಳಿಗಳೇ ಆಗಿದ್ದವು. ಹಳ್ಳಿಗಳಾಗಿದ್ದುಕೊಂಡೇ ನಾಗರಿಕತೆಯ ಪಯಣ ಶುರುಮಾಡಿ ನಗರಗಳಾಗಿ ಮಹಾನಗರಗಳಾಗಿರುತ್ತವೆ. ಅಂತೆಯೇ ಬೆಂದಕಾಳೂರು ಕ್ರಮೇಣ ಬೆಂಗಳೂರಾಗಿ, ಮಹಾನಗರವಾಗಿ ಬದಲಾಗಿದ್ದರೂ ಕಳೆಯುತ್ತಾ ಉಳಿಯುತ್ತಾ ತನ್ನದೇ ಆದ ಅಸ್ತಿತ್ವವನ್ನು ಕಾಪಾಡಿಕೊಂಡಿದೆ. ಆರ್ಥಿಕವಾಗಿ ಬೆಳೆಯುವುದಕ್ಕೆ ಬೇಕಾದ ಎಲ್ಲಾ ಸೌಲಭ್ಯಗಳನ್ನೂ ಮಹಾನಗರಗಳು ನೀಡುತ್ತಿವೆಯಾದರೂ, ಆಧುನಿಕತೆಯ ಭರದಲ್ಲಿ ಎಷ್ಟು ವೇಗವಾಗಿ ಬೆಳೆಯುತ್ತವೆಯೋ ಅಷ್ಟೇ ವೇಗವಾಗಿ ಮಾನವೀಯ ಮೌಲ್ಯಗಳು, ಸಂಬಂಧಗಳು ಕುಂಠಿತವಾಗುತ್ತಿವೆ. ಜೋಗಿಯವರ ಸಲಾಂ ಬೆಂಗಳೂರು ಇಂತಹ ನಗರಚಿತ್ರಣವನ್ನು ನೀಡುತ್ತಾ ಮಾನವೀಯ ಮೌಲ್ಯ, ಸಂಬಂಧಗಳು, ನಗರ ಜೀವನದ ವಿವಿಧ ಆಯಾಮಗಳ ಬಗ್ಗೆ ವಿಚಿಕಿತ್ಸಕ ದೃಷ್ಟಿಯನ್ನು ಬೀರುತ್ತದೆ.

Keywords: *ಸಲಾಂ ಬೆಂಗಳೂರು, ಬೆಂದಕಾಳೂರು, ನಗರೀಕರಣ, ಆಧುನೀಕರಣ, ಮಹಾನಗರ, ಪಾಮಜ್ಜಿ, ಜೋಗಿ, ವೆಂಕಟರಮಣ.*

ಪೀಠಿಕೆ

21ನೇ ಶತಮಾನದ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಗುರುತಿಸಿಕೊಳ್ಳುತ್ತಿರುವ ಜೋಗಿಯವರು ನಗರ ಬದುಕಿನ ತಲ್ಲಣಗಳನ್ನು ಕಟ್ಟಿಕೊಡುತ್ತಿದ್ದಾರೆ. ಇಂದಿನ ಬೆಂಗಳೂರಿನಂತಹ ಮಹಾನಗರವನ್ನು, ಅದರೊಡನೆ ಸಾಗುವ ಬದುಕನ್ನು ಸಮರ್ಥವಾಗಿ ಇವರ ಕಾದಂಬರಿಗಳು ನಮ್ಮ ಮುಂದೆ ಇರಿಸುತ್ತವೆ. ಬೆಂಗಳೂರನ್ನು ಒಳಹೊಕ್ಕರೆ ಹೇಗೆ ಬೆಂಗಳೂರೇ ಸಂಕೀರ್ಣವಾದುದು ಎಂದೆನಿಸುವುದೋ ಹಾಗೆಯೇ ಇವರ ಕಾದಂಬರಿಗಳನ್ನು ಪ್ರವೇಶಿಸಿದಾಗ ಬೆಂಗಳೂರಿನಂತಹ ದೊಡ್ಡ ನಗರಗಳ ಬದುಕು ಎಷ್ಟು ಸಂಕೀರ್ಣವಾಗಿದೆ ಎಂಬುದರ ಅರಿವು ಓದುಗರಿಗುಂಟಾಗುತ್ತದೆ.

2018ರಲ್ಲಿ ಪ್ರಕಟವಾದ 'ಸಲಾಂ ಬೆಂಗಳೂರು' ಜೋಗಿಯವರ ಕಾದಂಬರಿಗಳಲ್ಲಿ ವಿಶಿಷ್ಟವಾದುದು. ಬೆಂಗಳೂರು ಎಂಬ ಮಹಾನಗರದಲ್ಲಿ ಜೀವಿಸುತ್ತಿರುವ ಮನುಷ್ಯ ಸಂಕುಲದ ಜೀವನವನ್ನು ಕಾದಂಬರಿ ಎಳೆ ಎಳೆಯಾಗಿ ಚಿತ್ರಿಸುತ್ತಾ ಮಾನವ ಸಂಬಂಧವನ್ನು ಗಟ್ಟಿಗೊಳಿಸುವ ಆಶಯವನ್ನು ಹೊಂದಿದೆ. ತಾವು ವಾಸಿಸುತ್ತಿರುವ ಬೆಂಗಳೂರಿನ ಒಡನಾಟದ ಘಟನೆಗಳನ್ನು ಆಧರಿಸಿ ಸಲಾಂ ಬೆಂಗಳೂರು ಕಾದಂಬರಿಯನ್ನು ಸೃಷ್ಟಿಸಿದ್ದಾರೆ.

Please cite this article as: ಶಿವಕುಮಾರ್ ಜೆ & ಬಿ. ಪ್ರಭುಸ್ವಾಮಿ. (2024). ಸಲಾಂ ಬೆಂಗಳೂರಿನ–ಸಂಕೀರ್ಣ ಬದುಕು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 2(6), 33–40.

ಪ್ರಸ್ತುತ ಬೆಂಗಳೂರಿನ ವಾಸ್ತವತೆಯನ್ನು ವಿವರಿಸುತ್ತ, ಮನುಷ್ಯ ಸಂಬಂಧಗಳ ಜೊತೆಗೆ ಮಾನವೀಯ ಮೌಲ್ಯಗಳು, ಹಳ್ಳಿಯ ಜೀವನವನ್ನು ತ್ಯಜಿಸಿ ನಗರ ಜೀವನವನ್ನು ಆಯ್ದುಕೊಳ್ಳುವ ಜನರ ಮನಸ್ಥಿತಿ ಹಾಗು ಮಹಾನಗರಗಳಿಂದ ಮನುಷ್ಯನಿಗೆ ಆಗುತ್ತಿರುವ ಲಾಭ ನಷ್ಟಗಳ ಬಗೆಯನ್ನು ಕಾದಂಬರಿಯಲ್ಲಿ ತೆರೆದಿಟ್ಟಿದ್ದಾರೆ.

ಒಂದು ಕಾಲದಲ್ಲಿ ಬೆಂದಕಾಳೂರೆಂಬ ಹಳ್ಳಿಯಾಗಿದ್ದ ಊರು ಬೆಂಗಳೂರಾಗಿ ಬದಲಾಗಿರುವ ಮಹಾನಗರದ ವಾತಾವರಣವನ್ನು ಮತ್ತು ಆಧುನೀಕರಣದ ಹೆಸರಿನಲ್ಲಿ ವೇಗವಾಗಿ ಬದಲಾಗುತ್ತಲೇ ಇರುವ ಅಲ್ಲಿನ ಜನರ ಬದುಕಿನ ಶೈಲಿಯನ್ನು ಕಾದಂಬರಿಕಾರರು ತಮ್ಮ ಬರವಣಿಗೆಯ ಮೂಲಕ ಹಿಡಿದಿಟ್ಟಿದ್ದಾರೆ. ಪುನರುಜ್ಜೀವನದ ಯಾವ ಆಸೆಗಳೂ ಇಲ್ಲದೆ ನಿರುತ್ಸಾಹಕ್ಕೆ ಮಾರುಹೋದ ಒಬ್ಬ ತಪಸ್ವಿಯಂತೆ ಕಾಣುವ ಮಹಾನಗರಗಳಿಗೆ ಇರುವ ಕೆಟ್ಟ ಗುಣವೆಂದರೆ ಭಯ. ಧೈರ್ಯಶಾಲಿಯಂತೆ ಕಾಣುವ ಒಂದೊಂದು ಮಹಾನಗರವೂ ಸಹ ತನ್ನ ಅಂತರಂಗದೊಳಗೆ ಎಂಥ ಕೀಳರಿಮೆಯ ಭಾವವನ್ನಿಟ್ಟುಕೊಂಡು ಬದುಕುತ್ತಿರುತ್ತವೆ ಎಂದರೆ ಯಾವ ದೌರ್ಜನ್ಯ ಅಥವಾ ಹಿಂಸೆಯನ್ನು ಕನಿಷ್ಠ ಪಕ್ಷ ಪ್ರತಿಭಟಿಸುವ ಹೆಜ್ಜೆಯನ್ನು ಕೂಡ ಇಡುವುದಿಲ್ಲ. ಹಾಗಾಗಿ "ಕಂಡೋರ ಸುದ್ದಿ ನಮಗ್ಯಾಕೆ ಅಂತ ಸುಮ್ಮನಿರುವ ಮಧ್ಯಮವರ್ಗದಂತೆ ಮಹಾನಗರಗಳು ಎಲ್ಲವನ್ನು ಕಂಡು ಕಾಣದಂತೆ ಇದ್ದುಬಿಡುತ್ತವೆ"[1] ನಗರಗಳಲ್ಲಿ ವಾಸಿಸುವ ಜನರ ಮನಸ್ಥಿತಿಯನ್ನು ಈ ವಾಕ್ಯ ಧ್ವನಿಸುತ್ತದೆ. ಇಟ್ಟರೆ ಸಗಣಿಯಾದೆ, ತಟ್ಟಿದರೆ ಬೆರಣಿಯಾದೆ, ಸುಟ್ಟರೆ ನೊಸಲಿಗೆ ವಿಭೂತಿಯಾದೆ ನೀನಾರಿಗಾದೆಯೊ ಎಲೆಮಾನವ ಎಂಬ ನುಡಿಯಂತೆ ಮನುಷ್ಯ ಸದಾ ಪ್ರೀತಿ, ವಿಶ್ವಾಸ, ತ್ಯಾಗಭಾವದಿಂದ ಬಾಳಬೇಕು ಎಂಬುದೇ ಸತ್ಯ. ಮಾನವ ಕುಲದ ಉಳಿವಿಗೂ ಇದು ಕಾರಣ. ಇದೇ ಕಾದಂಬರಿಯ ಉದ್ದೇಶ ಮತ್ತು ಆಶಯವಾಗಿದೆ. ಆದರೆ ಆ ಆಶಯವಿಲ್ಲದ ಮನುಷ್ಯನ ಬದುಕಿನ ಗತಿ ಹೇಗಿರುತ್ತದೆಂಬುದನ್ನು ಕಾದಂಬರಿ ವಿಸ್ತಾರವಾಗಿ ಚಿತ್ರಿಸುತ್ತದೆ.

ಲೇಖಕನೊಬ್ಬ ತಾನು ಬೆಳೆಯುತ್ತಿರುವ ಪರಿಸರ, ಜೊತೆಯಲ್ಲಿ ವಾಸಿಸುವ ಜನರು ಇವುಗಳಿಂದ ಪ್ರಭಾವಿತಗೊಂಡು, ಆತನ ತಳಮಳ, ಅಭಿವ್ಯಕ್ತಿಯ ರೂಪ ತಾಳಿ ಬರವಣಿಗೆಯಲ್ಲಿ ಜನ್ಮತಾಳುವಂತೆ ಜೋಗಿಯವರು ತಮ್ಮ ಅನುಭವಗಳನ್ನು ಕಾದಂಬರಿ ಮೂಲಕ ವ್ಯಕ್ತ ಪಡಿಸಿದ್ದಾರೆ. "ಬೆಳೆದು ದೊಡ್ಡವನಾಗಿ ಏನಾಗಬೇಕು ಅಂತ ಅಂದುಕೊಂಡಿರುವೆ? ನಮ್ಮೂರು ಉಪ್ಪಿನಂಗಡಿಯನ್ನು ಕೇಳಿದೆ. ಧಿಮಾಕಿನಿಂದ ಬೆಂಗಳೂರು ಎಂದಿತು. ಮುಂದೆ ನೀನೇನಾಗಬೇಕು ಅಂದುಕೊಂಡಿದ್ದೀಯಾ ಅಂತ ಬೆಂಗಳೂರನ್ನು ಕೇಳಿದೆ. ಸಂಕೋಚದಿಂದ ಉಪ್ಪಿನಂಗಡಿ ಅಂದಿತು."[2] ಎಂತಹ ತಾತ್ವಿಕತೆಯ ದರ್ಶನವನ್ನು ಈ ಮೇಲಿನ ಮಾತು ಮಾಡಿಸುತ್ತದೆ ಎಂದರೆ ಉಪ್ಪಿನಂಗಡಿಯಂತಹ ಸಣ್ಣ ಹಳ್ಳಿಗಳಲ್ಲಿ ವಾಸಿಸುವ ಜನರು ಜೀವನೋಪಾಯಕ್ಕಾಗಿ ಬೆಂಗಳೂರಿನಂತಹ ಮಹಾನಗರದ ಬದುಕನ್ನು ಬಯಸಿ ಬರುತ್ತಾರೆ. ತಮ್ಮದಲ್ಲದ ಊರಿನಲ್ಲಿ ಮೂರುಹೊತ್ತಿನ ಊಟಕ್ಕಾಗಿ, ತೊಡುವ ಬಟ್ಟೆಗಾಗಿ ಕಷ್ಟ ಪಡುತ್ತಾರೆ. ಜಾಗತೀಕರಣದ ಪರಿಣಾಮದಿಂದ ಒಂದು ಕ್ಷಣವೂ ನಿಲ್ಲದೆ ಯಾಂತ್ರಿಕವಾಗಿ ಇಪ್ಪತ್ನಾಲ್ಕು ಗಂಟೆಗಳೂ ಓಡುತ್ತಲೇ ಇರುವ ಮಹಾನಗರದ ವೇಗದ ಸಮಕ್ಕೆ ಅದರ ಜೊತೆ ಜೊತೆಗೇ ಓಡುವ ಶಕ್ತಿಯೂ ಇಲ್ಲದೆ, ನಿಲ್ಲಲೂ ಆಗದೆ ನೆಮ್ಮದಿಯನ್ನು ಕಳೆದುಕೊಂಡು ಹೆಣಗಾಡುತ್ತಿರುತ್ತಾರೆ. ಇಲ್ಲಿ ಹಣ ಸಂಪಾದನೆಗೆ ಯಾವುದೇ ಕೊರತೆಯಿಲ್ಲದಿರಬಹುದು, ಆದರೆ ಹಣದಿಂದ ಆಹಾರವನ್ನು, ಮನೆಯನ್ನು, ಬಟ್ಟೆಯನ್ನು, ಔಷಧಿಗಳನ್ನು ಕೊಂಡಕೊಳ್ಳಬಹುದೇ ವಿನಃ ನೆಮ್ಮದಿ ಮತ್ತು ಪ್ರೀತಿ ತುಂಬಿದ ಸಂಬಂಧಗಳನ್ನು, ಆರೋಗ್ಯವನ್ನು ಕೊಂಡುಕೊಳ್ಳಲು ಎಂದಿಗೂ ಸಾಧ್ಯವಿಲ್ಲ. ಇದನ್ನು ಅರಿತಾಗ ಮಾತ್ರ ಬೆಂಗಳೂರು ಉಪ್ಪಿನಂಗಡಿಯಾಗಲು ಬಯಸಿದರೆ ಉಪ್ಪಿನಂಗಡಿ

ಉಪ್ಪಿನಂಗಡಿಯಾಗಿಯೇ ಉಳಿಯಲು ಬಯಸುತ್ತದೆ. ಆಗಮಾತ್ರ ವಲಸೆ ಬಂದ ಮಂದಿ ಪುನಃ ತಮ್ಮ ತಮ್ಮ ಹಳ್ಳಿಗಳಿಗೆ ಹಿಂತಿರುಗುವ ಆಶಯವನ್ನು ವ್ಯಕ್ತಪಡಿಸುತ್ತಾರೆ. ಉಪ್ಪಿನಂಗಡಿ ಮತ್ತು ಬೆಂಗಳೂರಿನ ಸ್ವಗತದಿಂದ ಇದನ್ನು ಧ್ವನಿಸಿದ್ದಾರೆ. ಜೋಗಿಯವರು ತಾವು ಬೆಳೆದ ಉಪ್ಪಿನಂಗಡಿ ಮತ್ತು ಜೀವಿಸುತ್ತಿರುವ ಬೆಂಗಳೂರಿನ ಪರಿಸರವನ್ನು ಕಂಡುಂಡವರು. ಆ ಹಿನ್ನೆಲೆಯಲ್ಲಿ ಎರಡೂ ಪರಿಸರದ ಮುಖಾಮುಖಿಯೊಡನೆ ತಮ್ಮ ಜೀವನದ ಅನುಭವ ಹಾಗು ನೆನಪುಗಳನ್ನು ತೆರೆದಿಡುತ್ತಾ ನಗರ ಜನ ಜೀವನದ ವಿವಿಧ ಆಯಾಮಗಳನ್ನು ಕಾದಂಬರಿಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಪರಂಪರಾಗತ ಮೌಲ್ಯಗಳನ್ನು ನಂಬಿಕೊಂಡಿದ್ದ, ಹಳ್ಳಿಯಲ್ಲಿ ತನ್ನ ಜೀವನವನ್ನು ಸಂತೋಷದಿಂದ ಕಳೆಯುತ್ತಿದ್ದ 'ಪಾಮಜ್ಜಿ' ಸಲಾಂ ಬೆಂಗಳೂರು ಕಾದಂಬರಿಯ ಕೇಂದ್ರವ್ಯಕ್ತಿ. ಪರಂಪರಾಗತವಾದ ಮೌಲ್ಯಗಳನ್ನು ಕೀರ್ತಿಸುವ ಹಂಬಲ ಕಾದಂಬರಿಯ ಉದ್ದೇಶವಲ್ಲ. ಆದರೆ ನಗರ ಜೀವನದ ಸಾಮಾಜಿಕ ಪರಿಸ್ಥಿತಿಯಲ್ಲಿ ಹುಟ್ಟಿಕೊಳ್ಳುವ ಅನುಭವದ ಪದರಗಳನ್ನು ಜಿಗುಪ್ಸೆಯ ಸ್ಥಾಯಿಯಲ್ಲಿ ಕತೆಯನ್ನು ಬಿಚ್ಚುತ್ತಲೇ ನಗರವಾಸಿಗಳ ಬದುಕಿನ ಧ್ವನಿಯನ್ನು ಸದ್ದಿಲ್ಲದೆ ಚಿತ್ರಣಗೊಳಿಸುವುದಾಗಿದೆ. ಬೆಂಗಳೂರಿನ ಚಿತ್ರಣವನ್ನು ವ್ಯಕ್ತಪಡಿಸುವುದಕ್ಕೆ ಕಾದಂಬರಿಯಲ್ಲಿ ಸೃಷ್ಟಿಸಿದ ಪಾತ್ರ 'ವೆಂಕಟರಮಣ'. ಈತ ಪಾಮಜ್ಜಿಯ ಮೊಮ್ಮಗ. ಹಳ್ಳಿ ಬಿಟ್ಟು ಬೆಂಗಳೂರಿಗೆ ಓಡಿಬಂದ ಮೊಮ್ಮಗ ವೆಂಕಟರಮಣನನ್ನು ಹುಡುಕಿಕೊಂಡು ಬರುವ ಪಾಮಜ್ಜಿ ಬೆಂಗಳೂರಿನಲ್ಲಿ ಪಡುವ ಪಾಡು ಈ ಕಾದಂಬರಿಯ ವಸ್ತುವಾಗಿದೆ. ರೈತನ ಮಗನಾಗಿ ಹುಟ್ಟಿದ ವೆಂಕಟರಮಣ ಹಳ್ಳಿಯ ಜೀವನ ಬೇಸರಿಸಿ, ತನ್ನ ಜಮೀನನ್ನು ಮಾರಿಕೊಂಡು ಬೆಂಗಳೂರಿಗೆ ಹೋಗಬೇಕೆಂಬ ಆಲೋಚನೆಗೆ ಪಾಮಜ್ಜಿ ತಿರಸ್ಕಾರವನ್ನು ಸೂಚಿಸುತ್ತಾಳೆ. ನಾನು ಬದುಕಿರುವ ತನಕ ನನ್ನ ಜಮೀನನ್ನು ಯಾರಿಗೂ ಮಾರುವುದಿಲ್ಲ ಎಂಬ ಪಾಮಜ್ಜಿಯ ನಿರ್ಧಾರವನ್ನು ಕೇಳಿದ ವೆಂಕಟರಮಣ ಬೇರೆ ದಾರಿಕಾಣದೆ ತನ್ನ ಅಜ್ಜಿಗೆ ಹೇಳದೆ ಕೇಳದೆ ಬೆಂಗಳೂರಿಗೆ ಬಂದಿರುತ್ತಾನೆ. ಇರುವ ಒಬ್ಬ ಮೊಮ್ಮಗನನ್ನು ಕಳೆದುಕೊಳ್ಳುವೆನೆಂಬ ಭಯದಿಂದ ಆತನನ್ನು ಹುಡುಕಿಕೊಂಡು ಬೆಂಗಳೂರಿಗೆ ಪಾಮಜ್ಜಿ ಬಂದಿರುತ್ತಾಳೆ. ಲೇಖಕರ ಬೆಂಗಳೂರು ಕಾದಂಬರಿಯಲ್ಲಿ ಬರುವ ವೆಂಕಟರಮಣನ ಪಾತ್ರವೇ ಅಜ್ಜಿಯ ಮೊಮ್ಮಗನಾಗಿ ಇಲ್ಲಿಯೂ ಮುಂದುವರೆದಿರುವುದು ವಿಶೇಷ ಸಂಗತಿ. ಜೋಗಿಯವರ ಬೆಂಗಳೂರು ಕಾದಂಬರಿಯನ್ನು ಓದಿದ್ದ ಅವರ ಸ್ನೇಹಿತರಾದ ಕುಂಟಿನಿಯವರ ಅಕ್ಕನಿಂದ ವಿಷಯ ತಿಳಿದ ಪಾಮಜ್ಜಿಯು ತನ್ನ ಮೊಮ್ಮಗನ ಬಗ್ಗೆ ಲೇಖಕರು ತಿಳಿದಿದ್ದಾರೆಂದು ಊಹಿಸಿ ಅವರಿಂದ ನನ್ನ ಮೊಮ್ಮಗ ಸಿಗುತ್ತಾನೆ ಎಂಬ ಆಸೆಹೊತ್ತು ಅವರ ಬಳಿ ಬಂದು ತನ್ನ ಮೊಮ್ಮಗನ ಬಗೆಗೆ ವಿಚಾರಿಸುವುದು ಮತ್ತು ಹುಡುಕಲು ಸಹಾಯ ಬೇಡುವುದು ಕಾದಂಬರಿಯ ತಂತ್ರವಾಗಿ ಮೂಡಿಬಂದಿದೆ. ಪಾಮಜ್ಜಿ ಒಂದು ಮುಗ್ಧ ಮನಸ್ಸಿನ ಪ್ರತೀಕ. ಪಾಮಜ್ಜಿಗೆ ಇದ್ದ ತಿಳಿವು ಮನುಷ್ಯ ಸಂಬಂಧದ್ದಾಗಿದೆ. ತನ್ನ ಮೊಮ್ಮಗನಿಗಾಗಿ ತೊಳಲಾಡುತ್ತಿರುವ ಪಾಮಜ್ಜಿಯೊಂದಿಗೆ ಹಳ್ಳಿಗಳನ್ನು ಪ್ರತೀಕವಾಗಿರಿಸಿಕೊಂಡು ನಗರ ಜೀವನವನ್ನು ಪರಿಚಯಿಸುವಲ್ಲಿ ಕಾದಂಬರಿಯು ಆಕಾರವನ್ನು ಪಡೆದುಕೊಂಡಿದೆ.

ಕಾದಂಬರಿಯಲ್ಲಿ ಚಿನ್ಮಯಿ, ವಿಜಯಲಕ್ಷ್ಮಿ ಪಾತ್ರಗಳನ್ನು ಸಂದರ್ಭಕ್ಕನುಗುಣವಾಗಿ ತಂದು ನಗರ ಜೀವನದ ಜೊತೆಗೆ ಈಗಿನ ಮಾನವ ಸಂಬಂಧಗಳ ಪರಿಚಯವನ್ನು ಸನ್ನಿವೇಶಕ್ಕನುಗುಣವಾಗಿ ಮಾಡಿಕೊಡಲಾಗಿದೆ.

ಲೇಖಕರು ಹೊಸದಾಗಿ ಕಥೆಯನ್ನು ರಚಿಸಬೇಕಿದ್ದ ಸಿನಿಮಾವೊಂದರ ಬಗೆಗೆ ಚಿಂತಿಸುತ್ತಾ, ಅವರು ಕಥೆಯಲ್ಲಿ ಸೃಷ್ಟಿಸಿದ್ದ ಪಾತ್ರವಾದ ಚಿನ್ಮಯಿಯ ಜೀವನದ ಬಗೆಗೆ ಯೋಚನೆ ಮಾಡುತ್ತಿರುತ್ತಾರೆ. ಆ ಸಂದರ್ಭದಲ್ಲಿ ಅವಳು ಯಾರನ್ನಾದರು ಪ್ರೇಮಿಸಿದರೆ ಮತ್ತು ಮನೆಯವರು ನೋಡಿದ ಗಂಡನ್ನು

ವಿವಾಹವಾದರೆ ಹೇಗೆ ಕಥೆಯನ್ನು ಮಾರ್ಪಾಡು ಮಾಡಿಕೊಳ್ಳಬಹುದು ಎಂದು ಆಲೋಚಿಸುತ್ತಿರುತ್ತಾರೆ. ಕೊನೆಗೆ ತಮ್ಮ ಕಥೆಯಲ್ಲಿ ಅವಳಿಗೆ ತಂದೆ ತಾಯಿ ನಿಶ್ಚಯ ಮಾಡಿದಂತೆ ವಿವಾಹವನ್ನು ಮಾಡಿಸಿ ನಂತರದ ಸಮಯದಲ್ಲಿ ಆ ಮದುವೆ ಅವಳಿಗೆ ಇಷ್ಟವಿಲ್ಲದೆ ಅದರಿಂದ ಮುಕ್ತಳಾಗಲು ಅವಳು ಯಾವ ನಿರ್ಧಾರಕ್ಕೆ ಬದ್ಧಳಾಗುತ್ತಾಳೆ ಎಂಬುದನ್ನು ಈ ರೀತಿ ಚಿತ್ರಿಸಿದ್ದಾರೆ. "ನಾನು ಅವನೂ ಪ್ರೀತಿಸಿ ಮದುವೆ ಆದವರಲ್ಲ. ನನ್ನನ್ನು ನನ್ನ ಮನೆಯವರು ಒಪ್ಪಿಸಿದರು. ಅವನಿಗೆ ನಾನೇ ಆಗಬೇಕಿರಲಿಲ್ಲ. ಯಾರೇ ಆಗಿದ್ದರೂ ಒಪ್ಪಿಕೊಳ್ಳುತ್ತಿದ್ದ".[3] ಎಂಬುದು ಚಿನ್ಮಯಿಯ ಮನಸ್ಸಿನಲ್ಲಿ ಮದುವೆಯ ಬಗೆಗೆ ಇದ್ದ ನಿಲುವನ್ನು ಸ್ಪಷ್ಟ ಪಡಿಸುತ್ತದೆ. ಮಗಳಿಗೆ ಮದುವೆ ಮಾಡುವುದೇ ದೊಡ್ಡ ಸಾಧನೆ ಎಂದು ನಂಬಿರುವ ಪೋಷಕರು, ಹೆಣ್ಣು ಮಕ್ಕಳಿಗೆ ಏನು ಕಡಿಮೆ ಮಾಡಿದ್ದೇವೆ ಎಂದು ಯೋಚಿಸುವುದಕ್ಕಿಂತ ತನಗೆ ಬೇಡವಾದದ್ದನ್ನು ಬೇಡ ಎಂದು ನಿರ್ಭಯವಾಗಿ ಹೇಳುವ ಸ್ವಾತಂತ್ರ್ಯವನ್ನು ಮಾತ್ರ ನೀಡಿರುವುದಿಲ್ಲ. ನಿರಾಕರಿಸುವ ಹಕ್ಕಿನಿಂದ ಹೆಣ್ಣು ಮಕ್ಕಳು ಎಂದಿಗೂ ವಂಚಿತರಾಗಿಯೇ ಇರುತ್ತಾರೆ ಎಂಬ ನಿಲುವನ್ನು ಪ್ರತಿಪಾದಿಸುವ ಚಿನ್ಮಯಿ ಜಗತ್ತಿನ ಅನೇಕ ಗ್ರಂಥಗಳನ್ನು, ಪುರಾಣಗಳನ್ನು ಓದಿರುತ್ತಾಳೆ ಮತ್ತು ಹೆಣ್ಣಿಗಾದ ಅವಮಾನಗಳನ್ನು, ಶೋಷಣೆಯನ್ನು ಅರ್ಥ ಮಾಡಿಕೊಂಡಿರುತ್ತಾಳೆ. ಇದೇ ಆಲೋಚನೆಯಿಂದ ಕೆಲವೊಮ್ಮೆ ಪೂರ್ವಗ್ರಹಪೀಡಿತಳಾಗಿಯೂ ಇರುತ್ತಾಳೆ. "ಬಂಧು ಬಳಗ, ಅಣ್ಣ-ತಮ್ಮ, ಅಕ್ಕ-ತಂಗಿ, ತಂದೆ-ಮಕ್ಕಳು- ತಾಯಿ ಇವರೆಲ್ಲರ ಮಧ್ಯೆ ಇದ್ದ ಸಂಬಂಧಗಳು ಮಾರುಕಟ್ಟೆಯ ಸಂಬಂಧಗಳಾಗಿ ಪರಿವರ್ತಿತವಾಗುತ್ತಿವೆ".[4] ಎಂಬ ಮಾತಿನಂತೆ ತಾನು ಇಷ್ಟ ಪಟ್ಟು ಮದುವೆಯಾಗಿದ್ದರೆ ಸುಖವಾಗಿರುತ್ತಿದ್ದೆ, ಎಂದುಕೊಳ್ಳುತ್ತಾಳೆ. ತಂದೆ ತಾಯಿ ತನ್ನ ಒಪ್ಪಿಗೆಯನ್ನು ಕೇಳದೆಯೇ ಸಮ್ಮತಿಸಿ ಮದುವೆ ಮಾಡಿರುವುದರಿಂದ, ಗಂಡನಿಂದ ಸಣ್ಣ ಪುಟ್ಟ ತಪ್ಪುಗಳಾದರು ಸಹ ಅವುಗಳು ತನ್ನ ಮೇಲೆ ನಡೆಯುವ ದೌರ್ಜನ್ಯ, ಎಂದು ಭಾವಿಸುತ್ತಾಳೆ. ಗಂಡ ಕಾರು ಓಡಿಸುವಾಗ ವಿಪರೀತ ಹಾರನ್ ಮಾಡುತ್ತಿರುವುದು ನನ್ನ ಮೇಲಾಗುತ್ತಿರುವ ಹಿಂಸೆ ಎಂದುಕೊಳ್ಳುತ್ತಾಳೆ. ಗಂಡ ಹೆಂಡತಿಯರಲ್ಲಿ ಮುಖ್ಯವಾಗಿ ಇರಬೇಕಾದದ್ದು ಹೊಂದಾಣಿಕೆ ಎಂಬ ಅರಿವು ಆಕೆಗಿರುವುದಿಲ್ಲ. ಒಂದು ಮದುವೆಯನ್ನು ಮುರಿಯುವುದಕ್ಕೆ ಹಾರ್ನಿನ ಕರ್ಕಶ ಸದ್ದು ಸಾಕು ಎಂಬುದು ಅವಳ ಮನಸ್ಥಿತಿಯಾಗಿದ್ದು, ಗಂಡನಿಂದ ವಿಚ್ಛೇದನ ಪಡೆಯಲು ಕಾರಣಗಳನ್ನು ಹುಡುಕುವ ಪಾತ್ರವಾಗಿ ಚಿನ್ಮಯಿ ಕಂಡು ಬರುತ್ತಾಳೆ.

ಚಿನ್ಮಯಿಯ ಕಥೆಯಂತೆಯೆ ಲೀಲಾವತಿಯ ಕಥೆಯೂ ಆಗಿದೆ. "ನಿನ್ನಂಥ ಬಿಕನಾಸಿಗೆ ನನ್ನ ಕೊಟ್ಟು ಮದುವೆ ಮಾಡಿದ. ನಿನ್ನಂಥೋನನ್ನು ಕಟ್ಟಿಕೊಂಡು ಹಾಳಾಗಿ ಹೋದೆ. ಬೇರೆ ಯಾರನ್ನ ಮದುವೆಯಾಗಿದ್ದರೂ ಸುಖವಾಗಿರುತ್ತಿದ್ದೆ."[5] ಎಂಬುದು ದಿನ ನಿತ್ಯವೂ ಕುಡಿದು ಬರುವ ಹಾಗೂ ದುಡಿದದ್ದನ್ನೆಲ್ಲ ಗಡಂಗಿನಲ್ಲಿ ಕಳೆದು ಬರಿಗೈಯಲ್ಲಿ ಮನೆಗೆ ಬರುತ್ತಿದ್ದ ತನ್ನ ಗಂಡನಿಗೆ ಲೀಲಾವತಿ ಬೈಯ್ಯುವ ಬೈಗುಳವಾಗಿದೆ. ಮನೆಯ ಬಗೆಗೆ ಜವಾಬ್ದಾರಿ ಇಲ್ಲದೆ ತನ್ನಷ್ಟಕ್ಕೆ ತಾನು ಕುಡಿಯುವುದು, ಸುತ್ತುವುದು ಇದೇ ರೀತಿಯ ತನ್ನ ತಂದೆಯ ದಿನಚರಿಯಿಂದ ಮತ್ತು ತನ್ನ ತಾಯಿಯ ಕಷ್ಟ ನೋವುಗಳಿಂದ ಬೇಸತ್ತಿದ್ದ ಲೀಲಾವತಿಯ ಮಗಳು ವಿಜಯಲಕ್ಷ್ಮಿ ಕುಡಿದು ಬಂದ ತನ್ನ ಅಪ್ಪನನ್ನು ಕೊಲೆಮಾಡಿಬಿಡುತ್ತಾಳೆ. ಈ ಪಾತ್ರಗಳನ್ನು ಸೃಷ್ಟಿಸಿರುವ ಕಾದಂಬರಿಕಾರನಿಗೆ ಯಾವ ಬಗೆಯ ಸಂಶಯ ಇದ್ದಂತಿಲ್ಲ. ನಮ್ಮ ಸಮಾಜ ಈ ಬಗೆಯಲ್ಲಿದೆಯೇ ಎಂಬುದನ್ನು ಸತ್ಯ ಶೋಧನೆ ಮಾಡಬೇಕಾಗುತ್ತದೆ. ಇದರಿಂದ ಬದುಕಿನ ಸತ್ಯಗಳನ್ನು ಹುಡುಕುವಲ್ಲಿ ಬೌದ್ಧಿಕ ಕ್ಷಮತೆಯನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ.

ಕಾದಂಬರಿಕಾರರು ತಮ್ಮ ಕಥಾ ನಿರೂಪಣೆಯನ್ನು ಎರಡು ಭಾಗಗಳಲ್ಲಿ ವಿಂಗಡಿಸಿದ್ದಾರೆ. ಒಂದು ಹಳ್ಳಿಯ ಚಿತ್ರಣ, ಮತ್ತೊಂದು ನಗರ ಚಿತ್ರಣವಾಗಿದೆ.

"ನನಗೆ ಇಲ್ಲಿದ್ದರೆ ಮದುವೆ ಆಗೋದಿಲ್ಲ ಯಾರೂ ಹೆಣ್ಣು ಕೊಡೋದಿಲ್ಲ ಊರಲ್ಲಿ ಮರ್ಯಾದೆ ಇಲ್ಲ".[6] ಎಂಬ ವೆಂಕಟರಮಣನ ಈ ಮಾತು ಹಳ್ಳಿಯಲ್ಲಿ ಜೀವಿಸಿ ಅಲ್ಲಿನ ವಾತಾವರಣಕ್ಕೆ ಸೋತ ಮನಸ್ಥಿತಿಯಾಗಿದೆ. ಆತನ ಆಲೋಚನೆ ಹಳ್ಳಿಯಲ್ಲಿ ಜೀವಿಸುವ ಎಷ್ಟೋ ಯುವ ಮನಸ್ಸುಗಳ ಪ್ರತೀಕವಾಗಿದೆ. ಹಳ್ಳಿಯಲ್ಲಿ ಹುಟ್ಟಿ ಬೆಳೆದು ಪಟ್ಟಣವನ್ನು ಅರಸಿ ಬಂದು ತಮ್ಮ ಜೀವನವನ್ನು ನೆಮ್ಮದಿ ಇಲ್ಲದಂತೆ ಮಾಡಿಕೊಂಡು ಮತ್ತೆ ಹಳ್ಳಿಗೆ ವಾಪಸ್ಸಾಗುವ ಎಷ್ಟೋ ಮಂದಿಗೆ ಈ ಕಾದಂಬರಿ ನೀತಿಪಾಠವನ್ನು ಹೇಳುತ್ತದೆ. "ಗ್ರಾಮೀಣ ಪ್ರದೇಶಗಳು ಮಾನವೀಯತೆಗೆ ಮಾನವ ಸಂಬಂಧಗಳಿಗೆ ಮುಖ್ಯವಾದ ಸ್ಥಾನ ಮತ್ತು ಆದ್ಯತೆಯನ್ನು ನೀಡುತ್ತಿದ್ದವು. ಆದರೆ ಜಾಗತೀಕರಣದ ಪ್ರಭಾವದಿಂದ ಮಾನವ ಸಂಬಂಧಗಳು ಆರ್ಥಿಕ ಸ್ಥಿತಿಗತಿಗಳನ್ನು ಅವಲಂಬಿಸಿ ನಿರ್ಧಾರವಾಗುತ್ತವೆ".[7] ಅಂತೆಯೇ ಮದುವೆ, ಸಂಬಂಧಗಳಲ್ಲಿಯೂ ಕೂಡ. ಪ್ರತಿಯೊಬ್ಬ ಮನುಷ್ಯನು ತನ್ನ ಜೀವನವನ್ನು ತಾನೇ ಎದುರಿಸಬೇಕು. ಹುಟ್ಟಿದ ಮರುಕ್ಷಣದಿಂದ ಸಾಯುವ ಕಡೆಘಳಿಗೆವರೆಗೂ ಮನುಷ್ಯ ತನ್ನ ಬದುಕಿನ ಹೋರಾಟವನ್ನು ನಡೆಸುತ್ತಿರುತ್ತಾನೆ. ಆದರೂ ತಾನೇ ವಾಸಿಸುವ ಸಮಾಜದಲ್ಲಿ ಹಲವು ಜೀವರಾಶಿಗಳ ಬಗೆಗೆ ಅನುಕಂಪ, ಮಾನವೀಯ ಗುಣಗಳು ಮನುಷ್ಯನಿಗೆ ಅತ್ಯಗತ್ಯ. ಕಾದಂಬರಿಯೊಳಗೆ ಹಳ್ಳಿಯನ್ನು ತ್ಯಜಿಸಿ ನಗರ ಜೀವನವನ್ನು ಅರಸಿ ಬರುತ್ತಿರುವ ವೆಂಕಟರಮಣನಂತಹ ಬಹು ಮಂದಿಗೆ ನಗರ ಜೀವನದ ಆಗು–ಹೋಗು, ಕಷ್ಟ–ಕಾರ್ಪಣ್ಯದ ಅನುಭವವಾಗಿ ನಗರ ಅಸಹ್ಯ ಎನಿಸದಿರದು. ಬೆಂಗಳೂರಿನ ಜಂಜಾಟದ ಬದುಕಿನಲ್ಲಿದ್ದರೂ ಪಾಮಜ್ಜಿಯನ್ನು ತಮ್ಮ ಮನೆಯಲ್ಲಿಯೇ ಇರಿಸಿಕೊಂಡು, ಅವಳ ಮೊಮ್ಮಗನನ್ನು ಹುಡುಕುವಷ್ಟು ದಿನವೂ ಊಟೋಪಚಾರಗಳನ್ನು ಮಾಡಿ, ಆ ಮುಗ್ಧ ಜೀವಕ್ಕೆ ಧೈರ್ಯ ತುಂಬಿ ಸಂತೈಸುವ ಲೇಖಕರ ಕುಟುಂಬ ಮತ್ತು ಅವರ ಸ್ನೇಹಿತ ಕುಂಟನಿಯಂತವರಲ್ಲಿನ ಮಾನವೀಯ ಅಂಶಗಳು ಇಂದಿಗೂ ಬೆಂಗಳೂರಿನಲ್ಲಿಯೂ ಇವೆ ಎಂಬುದನ್ನು ಮರೆಯಲಾಗದು.

ಮನುಷ್ಯ ಸಂಬಂಧಗಳ ಮೌಲ್ಯವರ್ಧನೆ ಆಗಬೇಕಾಗಿರುವುದನ್ನು ಅಭಿವ್ಯಕ್ತಿಸುವುದೇ ಈ ಕಾದಂಬರಿಯ ಮುಖ್ಯ ಉದ್ದೇಶವಾಗಿದೆ. "ಮನುಷ್ಯ ಅನ್ನವನ್ನು ತಿಂದು ಮಾತ್ರ ಬದುಕುವುದಿಲ್ಲ; ಆತ ನಂಬಿ, ಹತಾಶನಾಗಿ, ಪ್ರೇಮಿಸಿ, ನಿರಾಶನಾಗಿ, ಎಲ್ಲದರ ನಿರರ್ಥಕತೆ ತಿಳಿದು ಬದುಕುತ್ತಾನೆ".[8] ಎಂಬುದು ಕಟುಸತ್ಯ. ಮದ, ಮತ್ಸರ, ಲೋಭ, ಮೋಹ ಮತ್ತು ಕಾಮದಂತಹ ಅರಿಷಡ್ವರ್ಗಗಳಿಗೆ ಬಲಿಯಾಗಿ ಮಾನವೀಯ ಮೌಲ್ಯಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡದೆ ಜೀವಿಸುವ ಜನರ ಬದುಕಿನ ಸ್ಥಿತಿ ಅಸಹನೀಯವಾದುದು. ಗಂಡ ಕಾರು ಓಡಿಸುವಾಗ ವಿಪರೀತ ಹಾರನ್ ಮಾಡುತ್ತಿದ್ದ ಎಂಬ ಕಾರಣ ನೀಡಿ ವಿಚ್ಛೇದನ ಪಡೆಯಲೆತ್ನಿಸುವುದು, ಗಂಡ ಬೇರೊಬ್ಬ ಹೆಣ್ಣಿನ ಜೊತೆ ಮಾತಾಡಿದ ಕಾರಣಕ್ಕೆ ಕೊಲೆ ಮಾಡುವ ಹೆಂಡತಿ, ಪಕ್ಕದ ಮನೆಯಲ್ಲಿ ಗಂಡ–ಹೆಂಡತಿ ಜಗಳವಾಡಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಹೆಣ್ಣನ್ನು ನೋಡುವ ಪಕ್ಕದ ಮನೆಯವರು–ಇವುಗಳು ಹಳ್ಳಿಯಲ್ಲಿ ನಡೆಯುವುದಿಲ್ಲ ಎಂದು ಹೇಳಲಾಗುವುದಿಲ್ಲ. ಆದರೆ ನಗರ ಜೀವನದಲ್ಲಿ ಸಾಮಾನ್ಯ ಎಂದು ಭಾವಿಸಬಹುದೇನೊ. ಓದುಗರ ಮನದಲ್ಲಿ ಉಳಿಯವುವಂತೆ ಮತ್ತು ತಮ್ಮನ್ನು ತಾವು ಪರಾಮರ್ಶನ ಮಾಡಿಕೊಳ್ಳುವಂತೆ ಇವುಗಳನ್ನು ಲೇಖಕರು ಚಿತ್ರಿಸಿದ್ದಾರೆ.

"ಬ್ರಾಹ್ಮಣರ ಹುಡುಗ ಚಪ್ಪಲಿ ಮಾರುತ್ತಾನೆ, ಮಾಂಸಹಾರಿ ಹೋಟೆಲಿನಲ್ಲಿ ಸಪ್ಲೈಯರ್ ಆಗುತ್ತಾರೆ. ಗೌಡರ ಹುಡುಗ ಕೇಟರಿಂಗ್ ಸಂಸ್ಥೆಗಳಲ್ಲಿ ಜನಿವಾರ ಹಾಕಿಕೊಂಡು ಮದುವೆ ಊಟ ಬಡಿಸುತ್ತಾನೆ".[9] ಎಂಬ ಮಾತು ಒಂದೆಡೆ ಜಾತಿ ಮೀರಿದ ಬದುಕನ್ನು ತಿಳಿಸಿದರೆ ಮತ್ತೊಂದೆಡೆ ನಗರಗಳಲ್ಲಿಯೂ ಜಾತಿ ವ್ಯವಸ್ಥೆ ಇಂದಿಗೂ ಗಟ್ಟಿಯಾಗಿ ನೆಲೆಸಿರುವುದನ್ನು

ತಿಳಿಸುತ್ತದೆ. ಹಳ್ಳಿಯಲ್ಲಿ ಇಂದಿಗೂ ಜೀವಂತವಾಗಿರುವ ಜಾತಿ ವ್ಯವಸ್ಥೆ ನಗರ ಜೀವನದಲ್ಲಿ ಆದಷ್ಟು ಕಡಿಮೆಯಿದೆ ಎಂಬುದು ಸತ್ಯ. ಜಾತ್ಯಾತೀತವಾದ ವರ್ಣಾಶ್ರಮ ಧರ್ಮವನ್ನು ಮೀರಿದ ಸಮಾಜದ ನಿರ್ಮಾಣದ ಆಶಯವನ್ನು ಲೇಖಕರು ತಮ್ಮ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಹೀಗೆ ಕಾಲ ಕಳೆದಂತೆ ಎಲ್ಲವೂ ಬದಲಾವಣೆಯನ್ನು ಹೊಂದುವುದು ಸಹಜ ಗುಣ. ಇದಕ್ಕೆ ಪ್ರಕೃತಿಯು ಹೊರತಾಗಿಲ್ಲ. “ಪಾಳೆಯಗಾರಿಕೆಯ ಸಂಸ್ಕೃತಿ ಜಾತಿಯನ್ನು, ಜಾತಿಯ ವೃತ್ತಿ ಮತ್ತು ಕುಶಲತೆಯನ್ನು ರಕ್ಷಿಸುವ ವ್ಯವಸ್ಥೆ. ನೂರಾರು ವರ್ಷಗಳ ಹಿಂದೆ ಬದುಕಿನ ಗುಡಿಗಾರನೊಬ್ಬ ಕೃಷ್ಣನ ವಿಗ್ರಹವನ್ನು ಕೆತ್ತಿ ದೊರೆಗೆ ಅರ್ಪಿಸುವುದನ್ನು ಕಲ್ಪಿಸಿಕೊಂಡರೆ ಇದು ಅರ್ಥವಾಗುತ್ತದೆ. ಯಾರು ಜಾತಿಯ ಶೋಷಣೆ, ಪಾಳೇಗಾರಿಕೆಯ ನೆಮ್ಮದಿ, ಚಲನೆಯಿಲ್ಲದ ಸಮಾಜದ ಮೌಢ್ಯವನ್ನು ನಂಬಿ ಬದುಕುತ್ತಾರೋ ಅವರಿಗೆ ಈ ವ್ಯವಸ್ಥೆಯೇ ಅನುಕೂಲ”.[10] ಎಂಬ ಮಾತಿನಂತೆ ಮನುಷ್ಯನ ಬದುಕು ವಿದ್ಯೆ, ವಿಜ್ಞಾನ, ಸಂಸ್ಕೃತಿ, ಭಾಷೆ, ಆರ್ಥಿಕತೆ, ಸಾಹಿತ್ಯ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಸಾಕಷ್ಟು ಅಭಿವೃದ್ಧಿ ಸಾಧಿಸಿದ್ದರೂ ಕೂಡ, ಆಧುನಿಕ ಮಹಾನಗರಗಳ ವೈಭವ, ಆಡಂಬರಗಳ ಮುಂದೆ ಮುಗ್ಧತೆಯ ಪ್ರತೀಕಗಳಂತೆ ಕಾಣುವ ಹಳ್ಳಿಗಳಲ್ಲಿ ಜಾತಿ ವ್ಯವಸ್ಥೆ, ಲೇಖಕರು ಕೊಡುವ ನಗರ ಜೀವನದ ಜಾತಿ ವ್ಯವಸ್ಥೆಯ ಹೇಳಿಕೆಯಂತೆ ಬದಲಾಗಿಲ್ಲ. ಬಡತನ, ದಾರಿದ್ರ್ಯ, ಮೌಢ್ಯಗಳಲ್ಲೇ ಇಂದಿಗೂ ಉಸಿರಾಡುತ್ತಿರುವ ಹಳ್ಳಿಗಳಿಗೆ ಜಾತಿ ವ್ಯವಸ್ಥೆ ಮತ್ತೊಂದು ಮಾರಕ. ಯಾವ ರೀತಿಯಲ್ಲಾದರೂ ಸರಿ ಜಾತಿ ಪದ್ಧತಿಯನ್ನು ಬುಡಸಮೇತ ಕಿತ್ತು ವಿಶ್ವಮಾನವತೆಯ ಬೀಜವನ್ನು ನೆಡಬೇಕು, ಸಮಾನತೆಯ ಸಮಾಜ ಕಟ್ಟಬೇಕು. ಆಗ ಮಾತ್ರ ಸುಸ್ಥಿರ ಸಮಾಜದ ನಿರ್ಮಾಣ ಸಾಧ್ಯ. ಆದರೆ ನಗರ ಜೀವನದಲ್ಲಿ ಎಲ್ಲ ಎಲ್ಲೆಗಳ ಮೀರಿ ಬದುಕಬೇಕಾದ ಅನಿವಾರ್ಯತೆ ಇರುತ್ತದೆ. ಹೇಗಾದರೂ ಸರಿ ತನ್ನ ಹೊಟ್ಟೆಯನ್ನು ತಾನೆ ತುಂಬಿಸಿಕೊಳ್ಳಬೇಕಾದ ಪರಿಸ್ಥಿತಿ ಇರುತ್ತದೆ. ಆದ್ದರಿಂದ ಸಸ್ಯಹಾರಿಯಾದ ಬ್ರಾಹ್ಮಣ ಮಾಂಸಹಾರಿ ಹೋಟೆಲ್ನಲ್ಲಿ ಕೆಲಸ ಮಾಡುತ್ತಾನೆ. ಒಕ್ಕಲಿಗನಾದ ಗೌಡ ಕೇಟರಿಂಗ್ ಮಾಡುತ್ತಾನೆ. ಜಾತಿಯನ್ನು ಮುರಿಯುವುದಕ್ಕೆ ಜಾತ್ಯಾತೀತ ವಿವಾಹವಾಗುವುದೊಂದೇ ದಾರಿಯಲ್ಲ. ಹೊಟ್ಟೆಪಾಡು, ಜೀವನೋಪಾಯದ ಹಸಿವು ಕೂಡ ಜಾತಿಯನ್ನು ಮೀರುವ ಹಾಗೆ ಮಾಡುತ್ತದೆ. ಈ ಆಧುನಿಕ ನಗರ ಜೀವನದಲ್ಲಿ ತಾನು ಇಂಥ ಜಾತಿಯಲ್ಲಿ ಹುಟ್ಟಿದವನೆಂಬ ಭಾವನೆಯನ್ನು ತಮ್ಮ ತಮ್ಮ ಮನೆಗಳಿಗೆ ಮಾತ್ರವೇ ಸೀಮಿತವಾಗಿರಿಸಬೇಕು. ಹೊರಗಿನ ಸಮಾಜದಲ್ಲಿ ಅವನು ಜಾತ್ಯಾತೀತನಾಗಿ ಬದುಕಬೇಕಾಗುತ್ತದೆ. ಹಾಗೆಯೇ ಬದುಕಿದರೆ ಮಾತ್ರ ಜೀವನ ಸುಲಭವೂ ಸಹಜವೂ ಆಗಿರುತ್ತದೆ. ಆದರೂ ಕೆಲವೊಮ್ಮೆ ನಾವು ಬಿಟ್ಟರೂ ಜಾತಿ ನಮ್ಮನ್ನು ಬಿಡದೆ ಬೆನ್ನಟ್ಟುತ್ತದೆ. ಕೆಲವೊಮ್ಮೆ ನಮ್ಮದಲ್ಲದ ಜಾತಿಯ ವೇಷ ಹಾಕಿ ಬದುಕಬೇಕಾಗುತ್ತದೆ. ಆಧುನಿಕ ಜೀವನದಲ್ಲಿ ಜಾತಿ ಪರಿಕಲ್ಪನೆ ಹೀಗೆ ಬದಲಾಗಿರುವುದು ವಿಪರ್ಯಾಸ.

ಜೋಗಿಯವರ ನಗರ ಜೀವನದ ಒಡನಾಟದ ಅನುಭವವೇ ಕಾದಂಬರಿಯ ರೂಪ ಪಡೆದಿದೆ. “ಅನುಭವಗಳನ್ನು ಬಹುಶಃ ಯಾರೂ ಹುಡುಕಿಕೊಂಡು ಹೋಗುವುದಿಲ್ಲ ಲೋಕಕ್ಕೂ ನಮಗೂ ಒದಗುವ ನಿರಂತರ ಸಂಪರ್ಕ ಹಾಗೂ ಸಂಘರ್ಷಗಳ ಪರಿಣಾಮಗಳೆ ಅನುಭವಗಳಾಗಿ ಲಭಿಸುತ್ತವೆ.”[11] ಎಂಬ ಜಿಎಸ್ಎಸ್ ಅವರ ಮಾತು ನೆನಪಾಗುತ್ತದೆ. ಜೋಗಿಯವರ ಬಹುಪಾಲು ಕಾದಂಬರಿಗಳಲ್ಲಿ ನಗರ ಜೀವನದ ಸಂಘರ್ಷವೇ ಸ್ಥಾಯಿಯಾಗಿರುತ್ತದೆ. ಆ ಸಂಘರ್ಷ ತಂದೊಡ್ಡುವ ದುರಂತವನ್ನು ಅನುಕಂಪ, ಮಾನವೀಯ ದೃಷ್ಟಿಯಿಂದ ನೋಡುವ ಒಬ್ಬ ಮೌಲ್ಯವುಳ್ಳ ವ್ಯಕ್ತಿಯಾಗಿ ಕಾದಂಬರಿಕಾರರು ಕಾಣುವರು. ಆ ಹಿನ್ನೆಲೆಯಲ್ಲಿ ಜೋಗಿಯವರು ತಮ್ಮ ಕಾದಂಬರಿಗಳಲ್ಲಿ ಒಂದು ಪೋಷಕ ಪಾತ್ರವಾಗಿ ಮಿಕ್ಕ

ಪಾತ್ರಗಳಿಗೆ ಜೀವ ಕೊಡುತ್ತಾರೆ. ಅವರು ಯಾರಿಗೋ ಹೇಳುತ್ತಿರುವಂತೆ ಇಲ್ಲವೇ ಅವರಿಗೆ ಯಾರೋ ಹೇಳುತ್ತಿರುವಂತೆ ತಂತ್ರ ಇರುತ್ತದೆ.

ಒಂದು ಬೃಹತ್ ನಗರದಲ್ಲಿ ವಾಸಿಸುವ ಮನುಷ್ಯ ಜೀವನವನ್ನು ಶ್ರದ್ಧೆಯಿಂದ ಪರಿಭಾವಿಸುವ, ವ್ಯಾಖ್ಯಾನಿಸುವ ಮತ್ತು ವಿಮರ್ಶಿಸುವ ಮನಸ್ಸು ಜೋಗಿಯವರದು. ಕಾದಂಬರಿಯಲ್ಲಿ ರೂಪು ಪಡೆಯುವ ಅನುಭವ ನಗರ ಜೀವನದ ಬೋಧೆಯಾಗಿದೆ. ಪ್ರಸ್ತುತ ನಗರ ಸಂಸ್ಕೃತಿಯ ಸತ್ವವನ್ನು ಅದರ ಗುಣಾವಗುಣಗಳನ್ನು ಸಂದರ್ಭಕ್ಕನುಗುಣವಾಗಿ ಚಿನ್ಮಯಿ, ಲೀಲಾವತಿ, ವೆಂಕಟರಮಣ ಮತ್ತು ಪಾಮಜ್ಜಿಯ ಜೀವನದ ಹಲವು ಸನ್ನಿವೇಶಗಳಿಂದ ಲೇಖಕರು ಚಿತ್ರಿಸುತ್ತಾರೆ. ಆಧುನಿಕ ಮಾನವನ ಲಕ್ಷಣಗಳನ್ನು ತೆರೆದು ತೋರುವ ಜೋಗಿಯವರಲ್ಲಿ ಮಾನವೀಯ ಮೌಲ್ಯ, ಜೀವನ ವಿವೇಕ, ಸದೃಢವಾದ ಅನುಭವ ಸಮೃದ್ಧವಾಗಿದೆ. ಅದರ ಜೊತೆಗೆ ಸುಂದರ ನಿರೂಪಣೆಯ ಗುಣವೂ ಕಾದಂಬರಿಯ ಉನ್ನತ ಕಲೆಗಾರಿಕೆಗೆ ಕಾರಣವಾಗಿದೆ.

ಬಹಳ ವರ್ಷಗಳಿಂದ ಬೆಂಗಳೂರಿನಲ್ಲೇ ಜೀವನ ಮಾಡುತ್ತಿದ್ದವರೂ ಕೂಡ ಒಮ್ಮೆಗೇ ದಾಟಲಾಗದಂತಹ ರಸ್ತೆಗಳು, ನಿರ್ಭಯವಾಗಿ ನಡೆಯಲಾರದಂತಹ ಫುಟ್‌ಪಾತು, ಹಿಡಿಯಲಾರದಂತಹ ಬಸ್ಸುಗಳು, ಕರೆದೆಡೆಗೆ ಬರದ ಆಟೋಗಳು, ವಯಸ್ಸಾದವರು ಹತ್ತಲಾರದಷ್ಟು ಎತ್ತರದಲ್ಲಿರುವ ಮೆಟ್ರೋ ಸ್ಟೇಷನ್ನುಗಳು, ಇಂಗ್ಲೀಷ್ ಗೊತ್ತಿಲ್ಲದವರಿಗೆ ಕಂಗಾಲು ಮಾಡುವ ಮಹಾನಗರ, ಕರ್ನಾಟಕದಲ್ಲಿದ್ದರೂ ಯಾವುದೋ ಹೊರರಾಜ್ಯದವರಂತೆ ಕನ್ನಡ ಗೊತ್ತಿಲ್ಲದ ಜನಸಮೂಹ, ಬಹುತೇಕ ಹೊಸಬರಿಂದಲೇ ತುಂಬಿರುವ ಮತ್ತು ಮೂಲನಿವಾಸಿಗಳು ಮರೆಯಾದ ಊರು, ಹೊರಗಡೆ ಯಾರನ್ನೇ ಕೇಳಿದರೂ ನಾನು ಕೂಡ ಈ ಸಿಟಿಗೆ ಹೊಸಬ ಎಂಬ ಉತ್ತರವನ್ನು ಕೊಟ್ಟು ಪಾರಾಗುವವರೇ ತುಂಬಿರುವ ಬೆಂಗಳೂರು ಒಂದು ವಿಸ್ಮಯ. ಬೆಂಗಳೂರಿನಂತೆ ಅನೇಕ ಮಹಾನಗರಗಳೂ ವಿಸ್ಮಯವೇ ಆಗಿವೆ. ಪಾಮಜ್ಜಿಯ ಅಸಹಾಯಕತೆಯನ್ನು ಒಮ್ಮೆ ನೆನೆದ ಲೇಖಕರು “ಮಹಾನಗರಕ್ಕೆ ವಯಸ್ಸಾದವರ ಮೇಲೆ ಯಾವ ಕರುಣೆಯೂ ಇಲ್ಲ ಅದು ಎಲ್ಲರನ್ನೂ ಒಂದೇ ಥರ ನೋಡುತ್ತದೆ”.[12] ಎಂದು ಹೇಳಿದ್ದಾರೆ. ಮನುಷ್ಯನಿಗೆ ಪ್ರಕೃತಿದತ್ತವಾಗಿ ಬಂದ ಮೂಲ ಶಕ್ತಿಗಳಲ್ಲಿ ಅನುಕಂಪ, ಮಾನವೀಯ ಮೌಲ್ಯಗಳು ಮುಖ್ಯವಾದವು. ಮಾನವ ಪ್ರಪಂಚದಲ್ಲಿ ಇವುಗಳಿಗೆ ಸ್ಥಾನ ದೊರೆತಾಗ ಮಾತ್ರ ಮನುಷ್ಯ ಸಂಕುಲ ಸುಖ, ನೆಮ್ಮದಿಯಿಂದ ಜೀವಿಸುತ್ತದೆ. ಮಾನವ ಜನಾಂಗದ ಒಳಮನಸ್ಸು ಈ ಪ್ರಮುಖ ಅಂಶಗಳನ್ನು ಇಟ್ಟುಕೊಂಡು ಉನ್ನತ ಮತ್ತು ಉದಾತ್ತ ನೆಲೆಯಲ್ಲಿ ಪ್ರಕಾಶಗೊಳ್ಳಬೇಕು. ಬೆಂಗಳೂರು ನಗರ ಜೀವನದ ಲಕ್ಷಣಗಳನ್ನು ಚಿತ್ರಿಸಿರುವ ಲೇಖಕರ ನಿಲುವು ಮಾನವೀಯ ಮೌಲ್ಯಗಳನ್ನು ಸ್ಥಾಪಿಸುವುದೇ ಆಗಿದೆ.

ಯಾವುದೇ ಬಗೆಯ ಮಡಿವಂತಿಕೆಯಿಲ್ಲದೆ ಸಂಕೋಚವಿಲ್ಲದೆ ಬದುಕಿನ ಎಲ್ಲಾ ಬಗೆಯ ಅನುಭವಗಳಿಗೆ ಮುಕ್ತವಾಗಿ ತೆರೆದುಕೊಂಡಿರುವ ಮನಸ್ಥಿತಿ ಜೋಗಿಯವರದು. ಅವರ ಬರವಣಿಗೆಯ ಮಾನವೀಯ ದೃಷ್ಟಿಕೋನದ ಜೀವಂತ ತುಡಿತವೇ ಸಲಾಂ ಬೆಂಗಳೂರು ಕಾದಂಬರಿ.

ಕೊನೆ ಟಿಪ್ಪಣಿಗಳು

1. ಜೋಗಿ. (2020). ಸಲಾಂ ಬೆಂಗಳೂರು. ಪು. 7
2. ಅದೇ. ಪು.124
3. ಅದೇ. ಪು.15
4. ಪೋತೆ, ಎಚ್. ಟಿ. ವಿಚಾರ ಸಾಹಿತ್ಯ, ಪು.303
5. ಜೋಗಿ. (2020). ಪೂರ್ವೋಕ್ತ. ಪು.23
6. ಅದೇ. ಪು.59
7. ಪೋತೆ, ಎಚ್. ಟಿ. ಪೂರ್ವೋಕ್ತ. ಪು.303
8. ಲಂಕೇಶ್. ಪಿ. (2010). ಟೀಕೆ ಟಿಪ್ಪಣಿ, ಪು.191
9. ಜೋಗಿ. (2020). ಪೂರ್ವೋಕ್ತ. ಪು.34
10. ಲಂಕೇಶ್. ಪಿ. (2010). ಪೂರ್ವೋಕ್ತ. ಪು.179

11. ಶಿವರುದ್ರಪ್ಪ ಜಿ ಎಸ್. (2016). ಸಮಗ್ರ ಗದ್ಯ 2, ಪುಟ 2
12. ಜೋಗಿ. (2020). ಪೂರ್ವೋಕ್ತ. ಪು.80

ಪರಾಮರ್ಶನ ಗ್ರಂಥಗಳು

- ಜವರೇಗೌಡ ದೇ. (2012). *ಕನ್ನಡ ಸಂಸ್ಕೃತಿ.* ಕನ್ನಡ ಸಾಹಿತ್ಯ ಪರಿಷತ್ತು.
- ಜೋಗಿ. (2020). *ಸಲಾಂ ಬೆಂಗಳೂರು.* ಅಂಕಿತ ಪುಸ್ತಕ.
- ಕೀರ್ತಿನಾಥ ಕುರ್ತಕೋಟಿ. (2016). *ಯುಗಧರ್ಮ ಹಾಗೂ ಸಾಹಿತ್ಯ ದರ್ಶನ.* ಮನೋಹರ ಗ್ರಂಥಮಾಲಾ.
- ಲಂಕೇಶ್, ಪಿ. (2010). *ಟೀಕೆ ಟಿಪ್ಪಣಿ.* ಲಂಕೇಶ್ ಪ್ರಕಾಶನ.
- ರಾಮಚಂದ್ರನ್, ಸಿ ಎನ್. (2010). ವಸಾಹತೋತ್ತರ ಚಿಂತನೆ : ಅಂಕಿತ ಪುಸ್ತಕ.
- ರಾಮಚಂದ್ರನ್, ಸಿ ಎನ್. (2017). *ಸಮಕಾಲೀನ ತಲ್ಲಣಗಳು, ಚರಿತ್ರೆ, ಸಾಹಿತ್ಯ.* ಸಪ್ನ ಬುಕ್ ಹೌಸ್.
- ರಹಮತ್ ತರೀಕೆರೆ. (2019). *ಸಾಂಸ್ಕೃತಿಕ ಅಧ್ಯಯನ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಸತ್ಯನಾರಾಯಣ. (2012). *ಜಾಗತೀಕರಣ ಮತ್ತು ಕರ್ನಾಟಕ.* : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ.
- ಶಿವರುದ್ರಪ್ಪ ಜಿ ಎಸ್. (2016). ಸಮಗ್ರ ಗದ್ಯ–2, ಪ್ರಿಯದರ್ಶಿನಿ ಪ್ರಕಾಶನ.
- ಶಿವರಾಮಕಾರಂತ ಕೆ. (2018). *ಬಾಳ್ವೆಯೇ ಬೆಳಕು.* ಸಪ್ನ ಬುಕ್ ಹೌಸ್.